www.ecourtsindia.com

ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕ 07-01-2025.

ಪಾಟೀ ಸವಾಲು - ವಾದಿಯ ಪರವಾಗಿ ಶ್ರೀ ಎಸ್.ಜಿ.ಆರ್. ವಕೀಲರಿಂದಃ

1. ಈ ದಾವೆ ಮಾಡುವಾಗ ವಾದಿಯು ಬಿ.ಡಿ.ಎ. ಕಮೀಶನರ್ ಇವರನ್ನು ಪಕ್ಷಕಾರರನ್ನಾಗಿ ಮಾಡಿರುತ್ತಾರೆ. ನಾನು ಈ ಕೇಸಿನಲ್ಲಿ ಭೂಸ್ವಾಧಿನಾಧಿಕಾರಿಗಳ ಪರವಾಗಿ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಕಮೀಶನರ್ ರವರು ಬಿ.ಡಿ.ಎ. ನವರಿಗೆ ಕೊಟ್ಟ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. 2003 ರಲ್ಲಿ ಪ್ರಾಥಮಿಕ (ಕಲಂ 4(1)ರಡಿಯಲ್ಲಿ) ನೋಟಿಫಿಕೇಶನ್ ಆಗಿರುತ್ತದೆ. 2004 ರಲ್ಲಿ ಅಂತಿಮ (ಕಲಂ 6(1) ರಡಿಯಲ್ಲಿ) ನೋಟಿಫಿಕೇಶನ್ ಆಗಿರುತ್ತದೆ. ನಿಮ್ಮ ಪ್ರಕಾರ ದಾವಾ ಆಸ್ತಿಯ ಸ್ವಾಧೀನದಲ್ಲಿ ಈಗ ಯಾರು ಇದ್ದಾರೆ ಎಂದರೆ ಸಾಕ್ಷಿದಾರರು, ಬಿ.ಡಿ.ಎ. ದವರು ಇರುತ್ತಾರೆ ಎನ್ನುತ್ತಾರೆ. ನಿಶಾನೆ ಪಿ-20 ಫೋಟೋ ಪ್ರಕಾರ ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಯೇ ಎಂದರೆ ಸಾಕ್ಷಿದಾರರು, ಅನಧಿಕೃತ ಸ್ವಾಧೀನದಲ್ಲಿರುತ್ತಾರೆ ಎನ್ನುತ್ತಾರೆ. ನಿಪಿ-18 ರ ಪ್ರಕಾರ ಬಿಬಿಎಂಪಿ ರವರು ಟ್ರೇಡ್ ಲೈಸೆನ್ಸ್ ನ್ನು ವಾದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-19 ರ ಜಿ.ಎಸ್.ಟಿ. ಪ್ರಕಾರ ವಾದಿಗೆ ಕೇಂದ್ರ ಸರಕಾರದವರು ನಂಬರ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-17 ರ ಪ್ರಕಾರ ಬೆಸ್ಕಾಂ

This is a True Copy of the Court Records Online. Authenticated @ districts.ecourtsindia.com/cnr/KABC0A0039022022/truecopy/order-7.pdf

ನವರು ವಾದಿಗೆ ವಿದ್ಯುತ್ ಸಂಪರ್ಕ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ.

3. ನಿಶಾನೆ ಪಿ-15 ಬಿಬಿಎಂಪಿ ಖಾತಾ ವಾದಿಯ ಹೆಸರಿರನಲ್ಲಿರುತ್ತದೆ ಎಂದರೆ ಸಾಕ್ಷಿದಾರರು, ನನಗೆ ಗೊತ್ತಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದಾರೆ, ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

74 ನೇ ಅ.ನ.ಸಿ. ನ್ಯಾಯಾಧೀಶರು (ಸಿಸಿಎಚ್-75), ಮೇಯೋ ಹಾಲ್ ವಿಭಾಗ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0A0039022022/truecopy/order-7.pdf